# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 32/2018

ಸಿಡಬ್ಲು: 18 / ಪಿಡಬ್ಲು: 4

ದಿನಾಂಕ: 16.03.2024

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಈರಣ್ಣ ಜವಳಿ |
| ತಂದೆ ಹೆಸರು | : | ಸಿದ್ರಾಮಪ್ಪ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಸಹಾಯಕ ಇಂಜನೀಯ, ಕೆಪಿಟಿಸಿಎಲ್, ಗದಗ |
| ವಾಸ ಸ್ಥಳ | : | ಗದಗ |

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ನಾನು ದಿ: 02.01.2017 ರಿಂದ 22.07.2019 ರ ವರೆಗೆ ಮುಳಗುಂದನಾಕಾ ಗದಗ ಹೆಸ್ಕಾಂನ 1 ನೇ ಶಾಖೆಯಲ್ಲಿ ಸಹಾಯಕ ಇಂಜನೀಯರಾಗಿ ಕೆಲಸ ಮಾಡುತ್ತಿದ್ದೆನು.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿ: 06.02.2018 ರಂದು, ಚಾಸಾ-20 ರವರು ದಿ: 24.01.2018 ರಂದು ಗದಗನ ಮುಳಗುಂದ ರಸ್ತೆಯ ದೋಬಿ ಘಾಟ ಹತ್ತಿರ ಬೆಳಗಿನ ಜಾವ 01.00 ರಿಂದ ನಸುಕಿನ 06.00 ರ ವರೆಗೆ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಮಾಹಿತಿಯನ್ನು ಪೂರೈಸುವಂತೆ ನಮ್ಮ ಕಚೇರಿ ಪತ್ರವನ್ನು ಬರೆದಿದ್ದರು.

3. ಆ ಪ್ರಕಾರ, 110 ಕೆ.ವಿ. ಸಬ್ ಸ್ಟೇಷನ ಮಾಹಿತಿ ಮತ್ತು ಮುಳಗುಂದ ನಾಕಾ ದೂರು ನಿರ್ವಹಣಾ ಕೇಂದ್ರದ ದಾಖಲೆಗಳನ್ನು ಪರಿಶೀಲನೆ ಮಾಡಿ, **ಗದಗನ ಮುಳಗುಂದ ರಸ್ತೆಯ ದೋಬಿ ಘಾಟ ಹತ್ತಿರ ಬೆಳಗಿನ ಜಾವ 01.00 ರಿಂದ ನಸುಕಿನ 06.00 ರ ವರೆಗೆ ವಿದ್ಯುತ್ ಸರಬರಾಜುವಿನಲ್ಲಿ ಯಾದೇ ವ್ಯತ್ಯಯ ಇರಲಿಲ್ಲ ಎಂದು ಪ್ರಮಾಣ ಪತ್ರವನ್ನು ಪೂರೈಸಿರುತ್ತೇನೆ. ಈಗ ಸದರಿ ಪ್ರಮಾಣ ಪತ್ರವನ್ನು ನೋಡುತ್ತಿದ್ದು, ಅದನ್ನು ನಿಪಿ-18 ಎಂದು, ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು.**

## ಪಾಟಿ ಸವಾಲು: ಶ್ರೀ ಐ.ಎ. ಬೇಪಾರಿ, 8 ನೇ ಆರೋಪಿ ಪರ ವಕೀಲರಿಂದ:

4. ನಾನು 110 ಕೆ.ವಿ. ಸಬ್ ಸ್ಟೇಷನ ಇವರಿಗೆ ಪತ್ರವನ್ನು ಬರೆದು ಮಾಹಿತಿಯನ್ನು

ಪಡೆದುಕೊಂಡಿರುವುದಿಲ್ಲ. ಸಾಕ್ಷಿ ಸ್ವತಃ ನಾನೇ ಖುದ್ದಾಗಿ ಅಲ್ಲಿಗೆ ಹೋಗಿ ಪರಿಶೀಲಿಸಿ, ಮಾಹಿತಿಯನ್ನು ಪಡೆದುಕೊಂಡಿರುತ್ತೇನೆ ಎಂದು ಹೇಳಿರುತ್ತಾರೆ. ಮಾಹಿತಿಯನ್ನು ಪಡೆದುಕೊಳ್ಳಲು 110 ಕೆ.ವಿ. ಸಬ್ ಸ್ಟೇಷನಗೆ ಭೇಟಿ ನೀಡಿದ ಬಗ್ಗೆ ದಾಖಲೆಯನ್ನು ಪೋಲೀಸರಿಗೆ ಕೊಟ್ಟಿರುವುದಿಲ್ಲ. ಮುಳಗುಂದ ನಾಕಾ ದೂರು ನಿರ್ವಹಣಾ ಕೇಂದ್ರದ ದಾಖಲೆಗಳನ್ನು ನಿಪಿ-18 ರ ಜೊತೆ ಲಗತ್ತಿಸಿ ಪೋಲೀಸರಿಗೆ ಕೊಟ್ಟಿರುವುದಿಲ್ಲ.

5. ನಾನು 110 ಕೆ.ವಿ. ಸಬ್ ಸ್ಟೇಷನಗೆ ಹೋಗಿರುವುದಿಲ್ಲ ಮತ್ತು ಮಾಹಿತಿಯನ್ನು ಪಡೆದುಕೊಂಡಿರುವುದಿಲ್ಲ ಮತ್ತು ಪೋಲೀಸರಿಗೆ ಅನುಕೂಲವಾಗಲಿ ಎಂದು ನಿಪಿ-18 ನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲುಃ ಶ್ರೀ ಎಂ.ಎಂ. ಕುಕನೂರ, 2 ನೇ ಆರೋಪಿ ಪರ ವಕೀಲರಿಂದಃ</u>**

**(ಶ್ರೀಮತಿ ಆರ್.ಡಿ.ಎಲ್. ವಕೀಲರು 8 ನೇ ಪರವಾಗಿ ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)**

**<u>ಪಾಟಿ ಸವಾಲುಃ ಶ್ರೀ ಜೆ.ವಿ. ಪಠಾಣ, 3 ನೇ ಆರೋಪಿ ಪರ ವಕೀಲರಿಂದಃ</u>**

**(ಶ್ರೀ ಎಸ್.ಜಿ. ಗಾಜಿಯವರ ವಕೀಲರು 8 ನೇ ಪರವಾಗಿ ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)**

**<u>ಪಾಟಿ ಸವಾಲುಃ ಶ್ರೀ ಜಿ.ಡಿ. ಜಂತ್ಲಿ, 6 ನೇ ಆರೋಪಿ ಪರ ವಕೀಲರಿಂದಃ</u>**

**(ವಕೀಲರು ಗೈರು ಹಾಜರ ಇದ್ದು, 6 ನೇ ಆರೋಪಿತರು 8 ನೇ ಪರವಾಗಿ ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)**

**<u>ಮರು ವಿಚಾರಣೆ - ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸರಿ ಅದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಗದಗ